ಆ) ಈ ಬಗ್ಗೆ ಭೂ ಕಂದಾಯ ಅಧಿನಿಯಮಗಳಿಗೆ ತಿದ್ದುಪಡಿ ತರಲಾಗಿದೆಯೇ ? (ಮಾನ್ಯ ಕಂದಾಯ ಸಚಿವರಿಂದ ಅನುಮೋದಿತ)

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) –

ಅ) ಕರ್ನಾಟಕ ಭೂ ಕಂದಾಯ ಅಧಿನಿಯಮದನ್ವಯ ಪಟ್ಟಾ (ಖಾತಾ) ಬದಲಾವಣೆಗೆ ತೆಗೆದುಕೊಳ್ಳುವ ಸಮಯ 30 ದಿನಗಳಾಗಿದ್ದು, ಇದು ತಕರಾರುಗಳನ್ನು ಸಲ್ಲಿಸಲು ಇರುವ ನೋಟೀಸು ಸಮಯ.

ಆ) ಈ ಬಗ್ಗೆ ಭೂ ಕಂದಾಯ ಅಧಿನಿಯಮಗಳಿಗೆ ಯಾವುದೇ ತಿದ್ದುಪಡಿ ತಂದಿರುವುದಿಲ್ಲ.

210 (285) : ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) – ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೂಲ ಕೈಬರಹದ ಪಹಣಿಯಲ್ಲಿನ ದಾಖಲೆಗೂ ಗಣಕೀಕರಣ ಪಹಣಿಯಲ್ಲಿನ ದಾಖಲೆಗೂ ವ್ಯತ್ಯಾಸ ಉಂಟಾಗುವುದನ್ನು ಸರಿಪಡಿಸುವ ವಿಚಾರದಲ್ಲಿ ಅಧಿಕಾರವನ್ನು ಕೇಂದ್ರೀಕೃತಗೊಳಿಸಲಾಗಿದೆಯೇ ;

ಆ) ಹಾಗಿದ್ದಲ್ಲಿ, ಈ ಅಧಿಕಾರವನ್ನು ತಾಲ್ಲೂಕು ಮಟ್ಟಕ್ಕೆ ವಿಕೇಂದ್ರೀಕರಣಗೊಳಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ ? (ಮಾನ್ಯ ಕಂದಾಯ ಸಚಿವರಿಂದ ಅನುಮೋದಿತ)

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) –

ಅ) ಇಲ್ಲ. ತಿದ್ದುಪಡಿ ಕೆಲಸವು ರೈತರು ನೀಡುವ ಅರ್ಜಿಯ ಆಧಾರದ ಮೇಲೆ ತಾಲ್ಲೂಕು ಕಛೇರಿಯಲ್ಲಿ ತಾಲ್ಲೂಕು ಸಿಬ್ಬಂದಿಯಿಂದ ಪ್ರಾರಂಭಗೊಳ್ಳುತ್ತದೆ. ಭೂಮಿ ವ್ಯವಸ್ಥೆಯಲ್ಲಿ ತಿದ್ದುಪಡಿಯ ದುರುಪಯೋಗವನ್ನು ತಡೆಗಟ್ಟಲು, ಉಪ ವಿಭಾಗಾಧಿಕಾರಿಗಳು ತಮ್ಮ ಅನುಮೋದನೆಯನ್ನು ಮಾತ್ರ ನೀಡುತ್ತಾರೆ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

211 (286) : ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) – ಮಾನ್ಯ ಕಂದಾಯ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ :–

ಅ) ಉಡುಪಿ ಜಿಲ್ಲೆಯಲ್ಲಿರುವ ಹಿಂದುಳಿದ ಜನಾಂಗದವರಾದ "ಕೊರಗ" ಜನಾಂಗದವರಿಗೆ ಭೂಮಿ ಹಂಚಿಕೆ ಮಾಡಲು ಸರ್ಕಾರ ಆದೇಶ ಹೊರಡಿಸಿದೆಯೇ ?